# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ಸತ್ಯವ್ವ ತಳಗೇರಿ | ಫ್ರಾಸಾ-29 |
| ಗಂಡನ ಹೆಸರು | : | ಭರಮಪ್ಪ | ಚಾಸಾ-22 |
| ವಯಸ್ಸು | : | 66 ವರ್ಷ | |
| ಉದ್ಯೋಗ | : | ಕೂಲಿ ಕೆಲಸ/ಈಗ ಏನು ಇಲ್ಲ | |
| ವಿಳಾಸ | : | ಶಿರೋಳ, ತಾಃಮುಧೋಳ | |

ದಿಃ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ಆರೋಪಿತರು ಗೊತ್ತು. ನ್ಯಾಯಾಲಯದ ಮುಂದೆ ಮಲ್ಲಪ್ಪ ಹುದ್ದಾರ, ರಾಜು ಮತ್ತು ಶಂಕ್ರಪ್ಪ ಇದ್ದಾರೆ. ಚಾಸಾ-1 ರಿಂದ 3 ನನ್ನ ಸಂಬಂಧಿಗಳು ಇದ್ದಾರೆ. ಚಾಸಾ-3 ನನ್ನ ಮೊಮ್ಮಗ. ಚಾಸಾ-16 ರಿಂದ 26 ಎಲ್ಲ ನನ್ನ ಮಕ್ಕಳು, ಮೊಮ್ಮಕ್ಕಳು ಎಲ್ಲ ಸಂಬಂಧಿಗಳು ಇದ್ದಾರೆ. ದಸರಾ ಮುಗಿದು ಮಂಗಳವಾರ ದಿನ ಮುಂದಿನ ಮಂಗಳವಾರ ಈಗ್ಗೆ 6 ವರ್ಷ 8 ವರೆ ತಿಂಗಳ ಹಿಂದೆ. ನನ್ನ ಮಗ ವಿಠ್ಠಲ ಮತ್ತು ನನ್ನ ಮೈದುನ ಮಲೆಪ್ಪ ಕೊಲೆ ಆಗಿತ್ತು. ನಾನು ಆ ಸಮಯಕ್ಕೆ ಮುಧೋಳ ಪೊಲೀಸ ಠಾಣೆಯಲ್ಲಿ ಇದ್ದೆ. ಆರೋಪಿತರು ನ್ಯಾಯಾಲಯದ ಮುಂದೆ ಇರುವವರು ಹಾಗೂ ಇನ್ನು ಇತರರು ಕಟ್ಟೆಯ ಮೇಲೆ ತಲವಾರ ಹಿಡಿದುಕೊಂಡು ಸದಾಶಿವ ದೇವಸ್ಥಾನದ ಕಟ್ಟೆಯ ಮೇಲೆ ಕುಳಿತ್ತಿದ್ದರು. ಅರುಣ ನಾಗರಡ್ಡಿ ಕಿರಣ ನಾಗರಡ್ಡಿ ಇದ್ದರು. ಲಕ್ಷ್ಮಣ ವಗ್ಯೆರೆ ಇದ್ದರು. ನಾವು ಪೊಲೀಸರ ರಕ್ಷಣೆ ಕೋರಿ ಊರಿಗೆ ಹೋಗಲು ಅವಕಾಶ ಮಾಡಿಕೊಡಿ ಎಂದು ಕೇಳಲು ಹೋಗಿದ್ದೇವು. ಆಗ ಮುಕ್ಕರಿ ಪಿ.ಎಸ್.ಐ ಹಾಗೂ ಸಿ.ಪಿ.ಐ ಪಾಟೀಲ ರವರಿಗೆ ರಕ್ಷಣೆ ಕೊಡಲು ಕೋರಿದೇವು ಆದರೆ ಅವರು ನಮಗೆ ರಕ್ಷಣೆ ಕೊಡಲು ಬರಲಿಲ್ಲ. ನಾವು ಪೊಲೀಸ ಠಾಣೆಯಲ್ಲಿದ್ದಾಗ ಸಿ.ಪಿ.ಐ ಹಾಗೂ ಮುಕ್ಕರಿ ಊಟಕ್ಕೆಂದು ಹೊರಟು

ಹೋದರು. ನಾನು ಠಾಣೆಯಲ್ಲಿ ಕುಳಿತ್ತಿದ್ದೆ. ನನ್ನ ಜೊತೆಗೆ ಯಲ್ಲಪ್ಪ, ಮಹಾಂತೇಶ, ಮಾಳೆಪ್ಪ, ಮಹೇಶ, ಭರಮಪ್ಪ ಇದ್ದರು. ನನ್ನ ಮಗ ಯಲ್ಲಪ್ಪ ರಸ್ತೆಯ ಮೇಲೆ ಪೊಲೀಸ ಠಾಣೆ ಬಳಿ ನಿಂತ್ತಿದ್ದ ಅವನಿಗೆ ಪೋನ್ ಬಂತು. ಸದರಿ ಯಲ್ಲಪ್ಪನಿಗೆ ಪೋನ್ ಮುಖಾಂತರ ಮಲೆಪ್ಪ ಹಾಗೂ ವಿಠ್ಠಲನನ್ನು ಕೊಲೆ ಮಾಡಿದ್ದಾರೆಂದು ಗೊತ್ತು ಮಾಡಿದರು. ಮಲೆಪ್ಪನನ್ನು ಆಶ್ರಯ ಪ್ಲಾಟ ಕಲ್ಲೊಳ್ಳಿ ಗ್ರಾಮದಲ್ಲಿ ಕಡೆದಿದ್ದರು. ವಿಠ್ಠಲನನ್ನು ಗಣೆಯವರ ಜಮೀನಿನಲ್ಲಿ ಕಡೆದು ಹಾಕಿದ್ದರು. ನನ್ನ ಮಗನಿಗೆ ತಲೆಗೆ ಹೊಡೆದು ಹೋಳು ಮಾಡಿದ್ದರು. ಮುಂಗೈ ಹಾಗೂ ಬಲಗೈ ಐದು ಬೆರಳು ಕಡೆದಿದ್ದರು, ಮೂಗು ಕಡೆದಿದ್ದರು, ಕಣ್ಣು ತೆಗೆದಿದ್ದು, ಹಲ್ಲುಗಳನ್ನು ಹಾಗೂ ತುಟಿಯನ್ನು ಸೀಳಿದ್ದರು. ಮಲೆಪ್ಪನ ರುಂಡ ಹಾರಿಸಿದ್ದರು. ಕುತ್ತಿಗೆ ಕೊಯ್ದಿದ್ದರು. ಸದರಿ ಘಟನಾ ಜಾಗದಲ್ಲಿ ಊರಿನ ಜನ ಎಲ್ಲ ಸೇರಿದ್ದರು. ಸದರಿ ಸ್ಥಳದಲ್ಲಿ ನನ್ನ ಮಗನ ಚಪ್ಪಲಿ ಬಿದ್ದಿತ್ತು. ಅವರ ಕಾರ ಗಾಡಿಯ ಮುಂದಿನ ಬೋರ್ಡ ಬಿದ್ದಿತ್ತು. ನನ್ನ ಮಗನ ಬೈಕ ನೆಲದ ಮೇಲೆ ಬಿದ್ದಿತ್ತು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮುದ್ದೆಮಾಲು-1 ರಿಂದ 3 ನೋಡಿ ಗುರುತಿಸಿದ್ದು ಇದೆ. ಸದರಿ ಘಟನೆಗೆ 1 ನೇ ಆರೋಪಿ ಹಾಗೂ ಉಳಿದವರು ಜವಾಬುದಾರರು ಎಂದು ಗೊತ್ತಾಯಿತು. ಸದರಿ ಘಟನೆಯನ್ನು ನನ್ನ ಮೊಮ್ಮಗಳು ರೇಣುಕಾ ನೋಡಿ ಹೇಳಿದ್ದಳು. ಸದರಿ ದೂರನ್ನು ಯಲ್ಲಪ್ಪ ಕೊಟ್ಟಿದ್ದ. ಪೊಲೀಸರು ನನ್ನನ್ನು ವಿಚಾರಿಸಿದ್ದರು. ಸದರಿ ಮೃತ ದೇಹದ ಛಾಯಾಚಿತ್ರಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು ಇದೆ. ಅವುಗಳನ್ನು ಈಗಾಗಲೇ ನಿಪಿ-5 ರಿಂದ 10 ಎಂದು ಗುರುತಿಸಲಾಗಿದೆ.

ಸದರಿ ಕೊಲೆ ಮಾಡಲು ಕಾರಣ ಅದಕ್ಕೂ ಪೂರ್ವ ನಮ್ಮ ಊರಿನಲ್ಲಿ ನಮ್ಮ ಮನೆ ಒಡೆದಿದ್ದರು. ಅವರ ಜೊತೆಗೆ ಬೇರೆಯವರು ಆಗ ಬಂದಿದ್ದರು.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ನಾನು ಪೊಲೀಸರ ಮುಂದೆ ಈಗ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಸದಾಶಿವ ದೇವಸ್ಥಾನದ ಕಟ್ಟೆಯ ಮೇಲೆ ಕುಳಿತ್ತಿದ್ದಾರೆ ಎನ್ನುವ ವಿಚಾರ ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಹೇಳಿದ್ದೇನೆ. ಪೊಲೀಸರಿಗೆ ನಾವು ರಕ್ಷಣೆ ಕೊಡಲು ಕೋರಿದ ಬಗ್ಗೆ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ನಾನು ಹೇಳಿದ್ದರೂ ಪೊಲೀಸರೇ ಬರೆದಿಲ್ಲ. ನಾನು ಈಗ ಸಾಕ್ಷ್ಯದಲ್ಲಿ ನುಡಿದಂತೆ ಪೊಲೀಸರು ಊಟಕ್ಕೆ ಹೋದ ಬಗ್ಗೆ ನಮಗೆ ಜೊತೆಗೆ ಬಾರದಿರುವ ಬಗ್ಗೆ ಹೇಳಿಕೆಯಲ್ಲಿ ಬರೆದಿಲ್ಲ ಎಂದರೆ ಬರೆದಿಲ್ಲ. ನನ್ನ ಕುಟುಂಬದವರ ಕೊಲೆ ಮಾಡಿದ ಬಗ್ಗೆ ಅವರಿಗೆ ಆಗಿದ್ದ ಗಾಯಗಳ ಬಗ್ಗೆ ಹೇಳಿಕೆಯಲ್ಲಿ ದಾಖಲಾಗಿಲ್ಲ ಎಂದರೆ ಸಾಕ್ಷಿ ಅವುಗಳನ್ನು ಪೊಲೀಸರು ಬರೆದಿಲ್ಲ ಆದರೆ ನಾನು ಅವು ಗಳನ್ನೆಲ್ಲಾ ಹೇಳಿದ್ದೇನೆ. ನನ್ನ ಹೇಳಿಕೆಯಲ್ಲಿ ಈಗ ನ್ಯಾಯಾಲಯದಲ್ಲಿ ಗುರುತಿಸಿದ್ದ ಮುದ್ದೆಮಾಲು-1 ರಿಂದ 3 ರ ಕುರಿತು ದಾಖಲಿಲ್ಲ ಎಂದರೆ ಪೊಲೀಸರು ದಾಖಲು ಮಾಡಿಲ್ಲ. ಸದರಿ ಘಟನೆಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಹಾಗೂ ಇನ್ನುಳಿದವರು ಕಾರಣರು ಎಂದು ಪ್ರತ್ಯೇಕ್ಷದರ್ಶಿ ರೇಣುಕಾ ನನಗೆ ಹೇಳಿದ್ದಾಳೆ ಎನ್ನುವ ವಿಚಾರ ಹೇಳಿಕೆಯಲ್ಲಿ ದಾಖಲಾಗಿಲ್ಲ ಎಂದು ಸೂಚಿಸಿದರೆ ಪೊಲೀಸರು ಅವುಗಳನ್ನು ಬರೆದಿಲ್ಲ. ಈ ಕುರಿತು ನನ್ನ ಮಗ ಯಲ್ಲಪ್ಪ ದೂರಿದ್ದ ಬಗ್ಗೆ ಹಾಗೂ ಘಟನೆ ಆಗಲು ಕಾರಣ ಆ ಹಿಂದೆ ನಮ್ಮ ಮನೆ ಆರೋಪಿತರು ಬಂದು ಒಡೆದಿದ್ದರು ಎನ್ನುವ ಉಲ್ಲೇಖ ಸಹ ನನ್ನ ಹೇಳಿಕೆಯಲ್ಲಿ ಇಲ್ಲ ಎಂದರೆ ಪೊಲೀಸರು ಬರೆದಿಲ್ಲ. ಸದರಿ ನನ್ನ ಮಗ ಹಾಗೂ ಮಲ್ಲೆಪ್ಪ ಅಪಘಾತದಿಂದ ತೀರಿದ್ದಾರೆ ಎಂದು ಸೂಚಿಸಿದರೆ ಸುಳ್ಳು. ನನಗೆ ಘಟನೆಯ ಬಗ್ಗೆ ಗೊತ್ತಿಲ್ಲ ಯಲ್ಲಪ್ಪನ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಇಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾವು ಪೊಲೀಸ ಠಾಣೆಗೆ ಹೋಗಿದ್ದೇವು ಪೊಲೀಸರು ರಕ್ಷಣೆ ಕೊಡದೆ ಅಲ್ಲೆ

ಉಳಿದಿದ್ದೇವು ಎನ್ನುವ ಕುರಿತು ಯಾವುದೇ ಹೇಳಿಕೆ ನೀಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಇದೆ ಮೊದಲನೇ ಬಾರಿಗೆ ಹೇಳುತ್ತಿದ್ದು ಅವುಗಳೆಲ್ಲ ಸುಳ್ಳು ಎಂದು ಸೂಚಿಸಿದರೆ ಸರಿಯಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

# <u>ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ</u>

**<u>Spl.Case No.3/2020</u>**

| | | |
|---|---|---|
| ಹೆಸರು | : ವಿನಾಯಕ ಕೋಟಾಳೆ | ಫ್ರಾಸಾ-28 |
| ತಂದೆಯ ಹೆಸರು | : ರಮೇಶ | ಚಾಸಾ-15 |
| ವಯಸ್ಸು | : 36 ವರ್ಷ | |
| ಉದ್ಯೋಗ | : ಕೂಲಿ ಕೆಲಸ | |
| ವಿಳಾಸ | : ಮುಧೋಳ | |

ದಿಃ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ಆರೋಪಿತರು ಗೊತ್ತಿಲ್ಲ. ಯಲ್ಲಪ್ಪ ತಳಕೇರಿ ಗೊತ್ತಿಲ್ಲ. ಈಗ ಸುಮಾರು 5-6 ವರ್ಷಗಳ ಹಿಂದೆ ಪೊಲೀಸರು ನಾನು ಮನೆಯಲ್ಲಿದ್ದಾಗ ಕರೆಸಿದ್ದರು. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ ಅದನ್ನು ನಿಪಿ-52(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ನಾನು ಕಂಡು ಬರುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ-53 ರಿಂದ 59 ಎಂದು ಗುರುತಿಸಲಾಗಿದೆ. ನನಗೆ ಪೋಟೋಗಳು ತೆಗೆದಾಗ ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ಮಾಹಿತಿ ಕೊಟ್ಟಿಲ್ಲ. ಸದರಿ ಗಾಡಿಯ ಸಂಬಂಧ ಕೇಸು ಆಗಿದೆ ಎಂದು ತಿಳಿದುಬಂತು. ಪೊಲೀಸರು ನನ್ನನ್ನು ಸುಮಾರು ಮಧ್ಯಾಹ್ನ 1.00 ಗಂಟೆ ವೇಳೆಗೆ ಕರೆಸಿದ್ದರು.

## ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ

ಪೋಟೋ ತೆಗೆಯುವಾಗ ನನಗೆ ನಿಲ್ಲಲು ಹೇಳಿದಂತೆ ಮಾತ್ರ ನಿಂತಿದ್ದೇನಾ ಎಂದರೆ ಹೌದು. ಸದರಿ ಪೋಟೋ ಯಾಕೆ ತೆಗೆದಿದ್ದಾರೆ ಎಂದರೆ ಕಾರಿನ ಸಂಬಂದ

ನಂತರ ಕಾರಿನ ಲಪಡಾ ಇದೆ ಎಂದು ಗೊತ್ತಾಯಿತು. ಸದರಿ ಪಂಚನಾಮೆಯಲ್ಲಿ ಏನೇನು ಬರೆದಿದ್ದಾರೆ ವಿವರ ಗೊತ್ತಿಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.